ಕರ್ನಾಟಕ ಸರ್ಕಾರ

(ಜಲಾನಯನ ಅಭಿವೃದ್ಧಿ ಇಲಾಖೆ)

ಸಂ:ಜಅಇ/ಉಕೃನಿ/ಜಕೋ/ಕೃಅ2/ಜಅಬತ/ಅಬಿ/36/19-20

ಆಯುಕ್ತರ ಕಛೇರಿ
ಜಲಾನಯನ ಅಭಿವೃದ್ಧಿ ಇಲಾಖೆ
7ನೇ ಮಹಡಿ, ಕೆ.ಹೆಚ್.ಬಿ ಕಾಂಪ್ಲೆಕ್ಸ್,
ಕಾವೇರಿ ಭವನ, ಕೆ.ಜಿ.ರಸ್ತೆ,
ಬೆಂಗಳೂರು-09

ದಿನಾಂಕ:09.01.2020

wdd.cell@gmail.com

## ಕಛೇರಿ ಅದೇಶ

**ವಿಷಯ:** ಜಲಾನಯನ ಅಭಿವೃದ್ಧಿ ಮೂಲಕ ಬರಗಾಲ ತಡೆಯುವಿಕೆ ಕಾರ್ಯಕ್ರಮದಡಿ 2019-20 ನೇ ಸಾಲಿನ ಮೊದಲ ಕಂತಿನ ಅನುದಾನ ಬಿಡುಗಡೆ ಮಾಡುವ ಕುರಿತು

**ಉಲ್ಲೇಖ:**
1. ಸರ್ಕಾರದ ಆದೇಶ ಸಂಖ್ಯೆ:ಕೃಇ/49/ಕೃಯೋಕಾ/2019, ಬೆಂಗಳೂರು, ದಿನಾಂಕ:05.11.2019.
2. ದಿನಾಂಕ:14.11.2019 ರಂದು ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಅಭಿವೃದ್ಧಿ ಆಯುಕ್ತರು ಹಾಗೂ ಕೃಷಿ ಉತ್ಪನ್ನ ಆಯುಕ್ತರು ರವರ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯ ನಡವಳಿಗಳು
3. ಜಅಇ/ಮುಅಸಂ/ಸಸ್ಯಕ್ಷೇತ್ರ-ಸಸಿಗಳು/2019-20, ದಿನಾಂಕ:25.11.2019
4. ಜಅಇ/ಜಂಕೃನಿ(ಐಜಿಎ)/01/2019-20, ದಿನಾಂಕ:11.12.2019
5. ಜಅಇ/ಉಕೃನಿ/ಕೃಅ2/SWP/116/18-19 ದಿನಾಂಕ:19.12.2019
6. ಸರ್ಕಾರದ ಆದೇಶ ಸಂಖ್ಯೆ:ಕೃಇ/49/ಕೃಯೋಕಾ/2019, ಬೆಂಗಳೂರು, ದಿನಾಂಕ:02.1.2020.

*************

**ಪ್ರಸ್ತಾವನೆ:**

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರ (1) ರ ಸರ್ಕಾರದ ಆದೇಶದಲ್ಲಿ ರಾಜ್ಯದಲ್ಲಿ ಜಲಾನಯನ ಉಪಚಾರಕ್ಕೆ ಬಾಕಿ ಲಭ್ಯವಿರುವ ಮಳೆಯಾಶ್ರಿತ ಪ್ರದೇಶದಲ್ಲಿ 2019-20 ನೇ ಸಾಲಿನಿಂದ 2023-24ನೇ ಸಾಲಿನವರೆಗೆ, ಆಯ್ದ 100 ಬರಪೀಡಿತ ಮತ್ತು ಅತೀ ಹೆಚ್ಚು ಅಂತರ್ಜಲ ಶೋಷಿತ ತಾಲ್ಲೂಕುಗಳಲ್ಲಿ, ಪ್ರತಿ ತಾಲ್ಲೂಕಿನಲ್ಲಿ 3,000 ರಿಂದ 5,000 ಹೆಕ್ಟೇರ್ ಪ್ರದೇಶವನ್ನು ವಿಶ್ವಬ್ಯಾಂಕ್ ನೆರವಿನ ಸುಜಲಾ-III ಮಾದರಿಯ **ಭೂ** ಸಂಪನ್ಮೂಲ ಹಾಗೂ ಜಲಸಂಪನ್ಮೂಲ ಸಮೀಕ್ಷೆಯ ಮಾಹಿತಿಗಳನ್ನಾಧರಿಸಿ ಜಲಾನಯನ ಅಭಿವೃದ್ಧಿ ಯೋಜನೆಗಳನ್ನು ಸಂಪೂರ್ಣ ಜಲಾನಯನ ಉಪಚಾರದ ವಿಧಾನದಲ್ಲಿ **ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣಾ ಉದ್ಯೋಗ ಖಾತ್ರಿ ಯೋಜನೆ, ಪ್ರಧಾನಮಂತ್ರಿ ಕೃಷಿ ಸಿಂಚಯಿ ಯೋಜನೆ ಕಾರ್ಯಕ್ರಮದೊಡನೆ ಒಗ್ಗೂಡಿಸಿ ಮತ್ತು ಇತರೆ ಇಲಾಖೆಗಳ ಯೋಜನೆಗಳೊಂದಿಗೆ** ಒಗ್ಗೂಡಿಸಿ ಬರ ನಿರೋಧಕ ಜಲಾನಯನ ಚಟುವಟಿಕೆಗಳನ್ನು ಅನುಷ್ಠಾನ ಮಾಡಲು ಸೂಚಿಸಿದೆ.

ಮುಂದುವರೆದು ದಿನಾಂಕ:14.11.2019 ರಂದು ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು, ಕರ್ನಾಟಕ ಸರ್ಕಾರ ಇವರ ಅಧ್ಯಕ್ಷತೆಯಲ್ಲಿ **ಜಲಾನಯನ ಅಭಿವೃದ್ಧಿ ಮೂಲಕ ಬರಗಾಲ ತಡೆಯುವಿಕೆ** ಕಾರ್ಯಕ್ರಮದ ಉಸ್ತುವಾರಿ ಮತ್ತು ಮೇಲ್ವಿಚಾರಣೆಗೆ ರಚಿಸಿರುವ **ರಾಜ್ಯ ಮಟ್ಟದ ನೋಡಲ್ ಏಜೆನ್ಸಿಯ** ಸಭೆಯಲ್ಲಿ (ಉಲ್ಲೇಖ-2) ಸದರಿ ಯೋಜನೆಯ ಅನುಷ್ಠಾನಕ್ಕೆ ಅನುಮತಿ ನೀಡಲಾಗಿದೆ. ಉಲ್ಲೇಖಿತ ಪತ್ರ (3) ಮತ್ತು (4)

ರಲ್ಲಿ ಯೋಜನೆಯ ಪ್ರಾರಂಭಕ್ಕೆ ಮುನ್ನ ಅನುಷ್ಠಾನ ಮಾಡಬೇಕಾದ ಪ್ರವೇಶದ್ವಾರ ಚಟುವಟಿಕೆಗಳು ಮತ್ತು ಅರಣ್ಯ ನರ್ಸರಿ ಚಟುವಟಿಕೆಗಳನ್ನು ಅನುಷ್ಠಾನ ಮಾಡಲು ಸೂಚನೆ ನೀಡಲಾಗಿದೆ.

ಉಲ್ಲೇಖಿತ ಪತ್ರ (6) ರ ಸರ್ಕಾರದ ಆದೇಶದಲ್ಲಿ **ಜಲಾನಯನ ಅಭಿವೃದ್ಧಿ ಮೂಲಕ ಬರಗಾಲ ತಡೆಯುವಿಕೆ ಕಾರ್ಯಕ್ರಮದ ಅನುಷ್ಠಾನಕ್ಕೆ ಮೊದಲ ಕಂತಿನ ಅನುದಾನವಾಗಿ ಲೆಕ್ಕಶಿರ್ಷಿಕೆ: 4402-00-102-0-05 ಅಡಿ ರೂ. 2500.00 ಲಕ್ಷಗಳ ಅನುದಾನವನ್ನು ಯೋಜನೆಯ ಅನುಷ್ಠಾನಕ್ಕಾಗಿ ಜಲಾನಯನ ಅಭಿವೃದ್ಧಿ ಇಲಾಖೆಗೆ ಸರ್ಕಾರದಿಂದ ಬಿಡುಗಡೆಗೊಳಿಸಲಾಗಿದೆ.**

ಈ ಹಿನ್ನೆಲೆಯಲ್ಲಿ **ಜಲಾನಯನ ಅಭಿವೃದ್ಧಿ ಮೂಲಕ ಬರಗಾಲ ತಡೆಯುವಿಕೆ** ಯೋಜನೆಯಡಿ ಈ ಕೆಳಕಂಡಂತೆ ಜಿಲ್ಲೆಗಳಿಗೆ ಅನುದಾನ ಬಿಡುಗಡೆ ಮಾಡಲು ಆದೇಶ ಹೊರಡಿಸಲಾಗಿದೆ.

## ಆದೇಶ

ಪೀಠಿಕೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ **ಜಲಾನಯನ ಅಭಿವೃದ್ಧಿ ಮೂಲಕ ಬರಗಾಲ ತಡೆಯುವಿಕೆ** ಕಾರ್ಯಕ್ರಮದಡಿ ಒಟ್ಟು ರೂ. 2000.00 ಲಕ್ಷಗಳ ಅನುದಾನವನ್ನು **ಲೆಕ್ಕ ಶೀರ್ಷಿಕೆ:4402-00-102-0-05** ರಡಿ ಕೆಳಕಂಡಂತೆ ಜಿಲ್ಲೆಗಳಿಗೆ ಬಿಡುಗಡೆ ಮಾಡಿ, 2019-20 ನೇ ಸಾಲಿನ ಕ್ರಿಯಾ ಯೋಜನೆಯ **ಪ್ರಕಾರ ಪ್ರವೇಶದ್ವಾರ ಚಟುವಟಿಕೆಗಳ ಅನುಷ್ಠಾನ ಮತ್ತು ಅರಣ್ಯ ನರ್ಸರಿ ಘಟಕಗಳ** ವೆಚ್ಚವನ್ನು ನಿಯಮಾನುಸಾರ ಭರಿಸಲು ಸೂಚಿಸಿದೆ.

*ರೂ.ಲಕ್ಷಗಳಲ್ಲಿ*

| ಕ್ರ. ಸಂ | ಜಿಲ್ಲೆ | ಬಿಡುಗಡೆ ಮಾಡಲಾದ ಅನುದಾನ |
|---|---|---|
| 1 | 2 | 3 |
| 1 | ಬಾಗಲಕೋಟೆ | 34.92 |
| 2 | ಬೆಂಗಳೂರು ಗ್ರಾಮಾಂತರ | 31.10 |
| 3 | ಬೆಳಗಾವಿ | 130.68 |
| 4 | ಬಳ್ಳಾರಿ | 87.79 |
| 5 | ಬೀದರ್ | 70.85 |
| 6 | ವಿಜಯಾಪುರ | 73.11 |
| 7 | ಚಾಮರಾಜನಗರ | 40.58 |
| 8 | ಚಿಕ್ಕಬಳ್ಳಾಪುರ | 134.87 |
| 9 | ಚಿಕ್ಕಮಗಳೂರು | 43.34 |
| 10 | ಚಿತ್ರದುರ್ಗ | 85.94 |
| 11 | ದಕ್ಷಿಣ ಕನ್ನಡ | 60.64 |
| 12 | ದಾವಣಗೆರೆ | 81.93 |
| 13 | ದಾರವಾಡ | 31.25 |
| 14 | ಗದಗ | 63.70 |
| 15 | ಕಲಬುರಗಿ | 127.53 |
| 16 | ಹಾಸನ | 71.97 |
| 17 | ಹಾವೇರಿ | 99.24 |
| 18 | ಕೊಡಗು | 26.17 |
| 19 | ಕೋಲಾರ | 84.16 |

| 1 | 2 | 3 |
|---|---|---|
| 20 | ಕೊಪ್ಪಳ | 50.80 |
| 21 | ಮಂಡ್ಯ | 43.48 |
| 22 | ಮೈಸೂರು | 63.63 |
| 23 | ರಾಯಚೂರು | 89.87 |
| 24 | ರಾಮನಗರ | 38.63 |
| 25 | ಶಿವಮೊಗ್ಗ | 97.94 |
| 26 | ತುಮಕೂರು | 123.74 |
| 27 | ಉಡುಪಿ | 47.86 |
| 28 | ಉತ್ತರ ಕನ್ನಡ | 22.28 |
| 29 | ಯಾದಗಿರಿ | 42.00 |
| | ಜಿಲ್ಲಾ ಒಟ್ಟು (ಅ) | 2000.00 |
| | ಕೇಂದ್ರ ಕಛೇರಿ (ಆ) | 500.00 |
| | ಮಹಾ ಒಟ್ಟು (ಅ+ಅ) | 2500.00 |

ಈ ಮೇಲಿನಂತೆ ಬಿಡುಗಡೆಯಾದ ಅನುದಾನವನ್ನು ಈ ಕೆಳಕಂಡ ನಿಯಮ ಮತ್ತು ಷರತ್ತುಗಳ ಪ್ರಕಾರ ವೆಚ್ಚ ಭರಿಸಲು ಕ್ರಮವಹಿಸುವುದು.

1. **ಜಲಾನಯನ ಅಭಿವೃದ್ಧಿ ಮೂಲಕ ಬರಗಾಲ ತಡೆಯುವಿಕೆ ಕಾರ್ಯಕ್ರಮದ ಕಾರ್ಯಚರಣೆ ಕೈಪಿಡಿ (ಉಲ್ಲೇಖ-5)** ಹಾಗೂ ಕೇಂದ್ರ ಕಚೇರಿಯಿಂದ ಯೋಜನೆಯ ಅನುಷ್ಠಾನದ ಕುರಿತು ಈಗಾಗಲೇ ನೀಡಲಾದ ಸೂಚನೆಗಳ ಪ್ರಕಾರ ಕಾರ್ಯಕ್ರಮವನ್ನು ಅನುಷ್ಠಾನ ಮಾಡುವುದು.
2. ಜಲಾನಯನ ಚಟುವಟಿಕೆ/ಕಾಮಗಾರಿಗಳನ್ನು ಅನುಮೋದಿತ ಜಲಾನಯನ ಪ್ರದೇಶ ಮತ್ತು ಕಿರು ಜಲಾನಯನಗಳ ವ್ಯಾಪ್ತಿಯಲ್ಲಿಯೇ ಮಾತ್ರ ಅನುಷ್ಠಾನ ಮಾಡುವುದು (Watershed activities should be implented within in the approved project area).
3. ಈ ಕಾರ್ಯಕ್ರಮದ ಪೂರ್ವಸಿದ್ಧತಾ ಹಂತದ ಚಟುವಟಿಕೆಗಳಾದ **ಪ್ರಾಥಮಿಕ ಸಮೀಕ್ಷೆ (Base line survey), ಅರಿವು ಮೂಡಿಸುವ ಕಾರ್ಯಕ್ರಮಗಳಾದ ಗೋಡೆ ಬರಹ, ಜಾಥಾ, ಬೀದಿನಾಟಕ ಮತ್ತು ಇತರೆ ಚಟುವಟಿಕೆಗಳು ಹಾಗೂ ಸಮುದಾಯ ಆಧಾರಿತ ಸಂಘಗಳ ರಚನೆ ಮತ್ತು ಅವುಗಳ ತರಬೇತಿಗೆ** ಸರ್ಕಾರೇತರ ಸಂಸ್ಥೆಗಳನ್ನು ಕೇಂದ್ರ ಕಛೇರಿಯಿಂದ ಕೂಡಲೇ ನಿಯೋಜಿಸಲಾಗುವುದು.
4. ಯೋಜನೆಯ ಅನುಷ್ಠಾನದ ಪ್ರಥಮ ಅಂಗವಾಗಿ ಪ್ರವೇಶದ್ವಾರ ಚಟುವಟಿಕೆಗಳನ್ನು ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಉಲ್ಲೇಖ (4) ರ ಸೂಚನೆಗಳ ಪ್ರಕಾರ ಕ್ರಿಯಾ ಯೋಜನೆ ತಯಾರಿಸಿ, **ಜಂಟಿ ಕೃಷಿ ನಿರ್ದೇಶಕರ ಅಧ್ಯಕ್ಷತೆಯ ಜಿಲ್ಲಾ ಮಟ್ಟದ ತಾಂತ್ರಿಕ ಸಮಿತಿಯಲ್ಲಿ** ತಾಂತ್ರಿಕವಾಗಿ ಪರಿಶೀಲಿಸಿ, **ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್‌ರವರ ಅಧ್ಯಕ್ಷತೆಯ ಜಿಲ್ಲಾ ಮಟ್ಟದ ಸಮಿತಿಯ ಸಭೆಯಲ್ಲಿ ಅನುಮೋದನೆ ಪಡೆದು ಅನುಷ್ಠಾನ ಮಾಡುವುದು.**
5. ಯೋಜನೆಯ ಕುರಿತು ಹಸ್ತಪ್ರತಿಗಳು/ಕಿರು ಹೊತ್ತಿಗೆಗಳನ್ನು ಇಲಾಖೆಯ ಅಧಿಕಾರಿ/ಸಿಬ್ಬಂದಿಗಳ ಮೂಲಕ ಪ್ರವೇಶದ್ವಾರ ಚಟುವಟಿಕೆಗಳ ಅನುಷ್ಠಾನದ ಸಂದರ್ಭದಲ್ಲಿ ಯೋಜನಾ ವ್ಯಾಪ್ತಿಯ ಜನರಿಗೆ ಒದಗಿಸುವುದು.

6. ಯೋಜನೆ ಹಾಗೂ ಪ್ರವೇಶದ್ವಾರ ಚಟುವಟಿಕೆಗಳ ಅನುಷ್ಠಾನದ ಕುರಿತು ಸ್ಥಳೀಯ ಜನಪ್ರತಿನಿಧಿಗಳ ಗಮನಕ್ಕೆ ತರುವುದು.

7. ಪ್ರವೇಶದ್ವಾರ ಚಟುವಟಿಕೆಗಳನ್ನು ತಾಲ್ಲೂಕಿನ ಯೋಜನಾ ಅನುಷ್ಠಾನ ಸಂಸ್ಥೆಯ (PIA) ಮೂಲಕ KTPP ನಿಯಮಾನುಸಾರ ಅನುಷ್ಠಾನ ಮಾಡುವುದು.

8. ಪ್ರತಿ ಯೋಜನೆಯ ಪ್ರತಿ ಕಿರು ಜಲಾನಯನಗಳಿಗೆ ತಲಾ 10,000 ದ ವರೆಗೆ/ ಬೇಡಿಕೆಯ ಅನುಸಾರ ಅರಣ್ಯ ಸಸಿಗಳನ್ನು ಉಲ್ಲೇಖಿತ ಪತ್ರ (3) ರ ಸೂಚನೆಯ ಪ್ರಕಾರ ಬೆಳೆಸಲು ಕ್ರಮವಹಿಸುವುದು.

9. ನಿವ್ವಳ ಯೋಜನೆ/ವಿಸ್ತೃತ ಯೋಜನಾ ವರದಿಯನ್ನು ಸಂಪೂರ್ಣ ಜಲಾನಯನ ಉಪಚಾರಕ್ಕೆ (for the complete saturation) ತಯಾರಿಸುವುದು. ವಿವಿಧ ಮೂಲಗಳ ಸಂಪನ್ಮೂಲಗಳನ್ನು ಬಳಸಿಕೊಂಡು ನಿವ್ವಳ ಯೋಜನೆಯನ್ನು ತಯಾರಿಸಲು ಅಗತ್ಯ ಕ್ರಮವಹಿಸುವುದು.

10. ಜಲಾನಯನ ಅಭಿವೃದ್ಧಿ ಮೂಲಕ ಬರಗಾಲ ತಡೆಯುವಿಕೆ ಕಾರ್ಯಕ್ರಮದಿಂದ ಪ್ರತಿ ಹೆಕ್ಟೇರ್‌ಗೆ ರೂ.12,000/- ಗಳನ್ನು ಹಾಗೂ ಉಳಿದ ಅನುದಾನವನ್ನು **ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣಾ ಉದ್ಯೋಗ ಖಾತ್ರಿ ಯೋಜನೆ ಮತ್ತು ಪ್ರಧಾನಮಂತ್ರಿ ಕೃಷಿ ಸಿಂಚಯಿ ಯೋಜನೆ- ಇತರೆ ಉಪಚಾರಗಳು ಕಾರ್ಯಕ್ರಮದೊಡನೆ** ಒಗ್ಗೂಡಿಸಿ ಅನುಷ್ಠಾನ ಮಾಡುವುದು.

11. ನಿವ್ವಳ ಯೋಜನೆ ಮತ್ತು ವಿಸ್ತೃತ ಯೋಜನಾ ವರದಿಯ ತಯಾರಿಕೆಗೆ ಪೂರ್ವ ಭಾವಿಯಾಗಿ ಅತ್ಯವಶ್ಯಕವಿರುವ 41 ವಿವಿಧ ಬಗೆಯ ವಿಷಯಾಧಾರಿತ ಭೂ ಸಂಪನ್ಮೂಲ ಮತ್ತು ಜಲ ಸಂಪನ್ಮೂಲ ಸಮೀಕ್ಷೆಯ (Land Resource Information) ನಕಾಶೆಗಳನ್ನು **ಕೃಷಿ/ತೋಟಗಾರಿಕಾ ವಿಶ್ವವಿದ್ಯಾ ನಿಲಯಗಳು/NBSS&LUP ಸಂಸ್ಥೆಯ ಕಡೆಯಿಂದ** ಕೈಗೊಳ್ಳಲು ಕ್ರಮವಹಿಸುವುದು.

12. **ಔರದ್ ತಾಲ್ಲೂಕು, ವಿಜಯಾಪುರ ತಾಲ್ಲೂಕು, ಚಾಮರಾಜನಗರ ತಾಲ್ಲೂಕು, ಗದಗ್ ತಾಲ್ಲೂಕು, ಕಲಬುರಗಿ ತಾಲ್ಲೂಕು ಮತ್ತು ಕೊಪ್ಪಳ ತಾಲ್ಲೂಕುಗಳಲ್ಲಿ** ಈಗಾಗಲೇ 41 ವಿವಿಧ ವಿಷಯಾಧಾರಿತ ಭೂ ಸಂಪನ್ಮೂಲ ಮತ್ತು ಜಲ ಸಂಪನ್ಮೂಲ ಸಮೀಕ್ಷೆಯ (Land Resource Information) ನಕಾಶೆಗಳು ತಯಾರಾಗಿದ್ದು, ಈ 6 ತಾಲ್ಲೂಕುಗಳಲ್ಲಿ ಸರ್ಕಾರೇತರ ಸಂಸ್ಥೆಗಳನ್ನು ನಿಯೋಜಿಸಿದ ಕೂಡಲೇ ವಿಸ್ತೃತ ಯೋಜನಾ ವರದಿಯನ್ನು ತಯಾರಿಸಿ ಜಿಲ್ಲಾ ಮಟ್ಟದ ಸಮಿತಿಯಲ್ಲಿ ಅನುಮೋದನೆ ಪಡೆದುಕೊಳ್ಳುವುದು.

13. ಜಲಾನಯನ ಅಭಿವೃದ್ಧಿ ಇಲಾಖೆಯಿಂದ ಅಧೀನ ಕಛೇರಿಗಳಿಗೆ ಬಿಡುಗಡೆಯಾಗುವ ಅನುದಾನವು ಇಲಾಖೆಯು ಕೈಗೊಳ್ಳುವ ಆಂತರಿಕ ಆಡಿಟ್ ಮತ್ತು ಭಾರತದ ಕಂಟ್ರೋಲರ್ ಮತ್ತು ಆಡಿಟರ್ ಜನರಲ್ ರವರ ಕಛೇರಿಯ ಆಡಿಟ್‌ಗೆ ಒಳಪಡುತ್ತದೆ.

14. ಬಿಡುಗಡೆ ಮಾಡಲಾದ ಅನುದಾನದಿಂದ ಕಂಪ್ಯೂಟರ್/ಲಾಪ್‌ಟ್ಯಾಪ್/ಪೋಟೋಕಾಪಿಯರ್/ವಿಡಿಯೋ ರೆಕಾರ್ಡರ್/ಪ್ರೊಜೆಕ್ಟರ್, ಇನ್ನಿತರೆ ಯಾವುದೇ ಕ್ಯಾಪಿಟಲ್ ವಸ್ತುಗಳನ್ನು ಖರೀದಿಸಲು ಅನುಮತಿಸಲಾಗಿರುವುದಿಲ್ಲ.

15. ಯೋಜನಾ ಅನುಷ್ಠಾನದ ಸಂಸ್ಥೆಯು (ಸಹಾಯಕ ಕೃಷಿ ನಿರ್ದೇಶಕರ ಕಛೇರಿ) ಹಾಗೂ ಸಹಾಯಕ ಹಾಗೂ ಅರಣ್ಯ ಸಂರಕ್ಷಣಾಧಿಕಾರಿಗಳು/ಹಿರಿಯ ತೋಟಗಾರಿಕಾ ನಿರ್ದೇಶಕರು ವೆಚ್ಚ ಮಾಡಲಾದ ಅನುದಾನಕ್ಕೆ ವಿವರಗಳನ್ನು ಕ್ರಮಬದ್ಧವಾಗಿ ನಿರ್ವಹಣೆ ಮಾಡಬೇಕು. ಜಂಟಿ ಕೃಷಿ ನಿರ್ದೇಶಕರು ತಮ್ಮ ಹಂತದಲ್ಲಿ ಜಿಲ್ಲಾ ಕೇಂದ್ರ ಸ್ಥಾನದ

ತಾಲ್ಲೂಕಿನ ಯೋಜನಾ ಅನುಷ್ಠಾನ ಸಂಸ್ಥೆಯ (PIA) ಜವಬ್ದಾರಿಯನ್ನು ಕ್ರಿಯಾಶೀಲರಾಗಿರುವ ACF/SADH ರವರಿಗೆ ವಹಿಸಲು ಅಗತ್ಯ ಕ್ರಮವಹಿಸುವುದು.

16. ಮಾಸಿಕ ಪ್ರಗತಿ ವರದಿಗಳನ್ನು ಭೌತಿಕ ಮತ್ತು ಆರ್ಥಿಕ ವಿವರಗಳೊಂದಿಗೆ ಕೇಂದ್ರ ಕಛೇರಿಯಿಂದ ಒದಗಿಸಲಾದ ನಮೂನೆಗಳ ಪ್ರಕಾರ ಒದಗಿಸಬೇಕು. ಅನುಷ್ಠಾನ ಮಾಡುವ ಸಂಸ್ಥೆಯು ಕಾಲಕಾಲಕ್ಕೆ ತಿದ್ದುಪಡಿ ಮಾಡಲಾದ **ಕರ್ನಾಟಕ ಆರ್ಥಿಕ ಸಂಹಿತೆ** ಮತ್ತು **ಕರ್ನಾಟಕ ಖಜಾನೆ ಸಂಹಿತೆಯಲ್ಲಿ** ಒಳಗೊಂಡಿರುವ ನಿಯಮ ಮತ್ತು ನಿಬಂಧನೆಗಳನ್ನು ತಪ್ಪದೇ ಅನುಸರಿಸಬೇಕು.

17. 1) ಯೋಜನೆಯ ಅನುಷ್ಠಾನಕ್ಕೆ ಮುನ್ನ ಯೋಜನೆಯ ಕುರಿತು ನಾಮಪಲಕ/ಗೋಡೆಬರಹ ಬರೆಸುವುದು

2)ಕಾಮಗಾರಿ/ಚಟುವಟಿಕೆಗಳನ್ನು ಅನುಷ್ಠಾನಮಾಡಿದ ನಂತರ, ಕಾಮಗಾರಿಯ ವಿವರಗಳಾದ **ಅ)ಯೋಜನೆಯ ಹೆಸರು ಆ)ಕಾಮಗಾರಿಯ ಹೆಸರು ಇ)ಅನುಷ್ಠಾನ ಮಾಡಲಾದ ವರ್ಷ ಈ)ನೀರು ಸಂಗ್ರಹಣಾ ಸಾಮರ್ಥ್ಯ ಉ)ಅಕ್ಷಾಂಶ ಮತ್ತು ರೇಖಾಂಶದ ವಿವರಗಳು ಋ)ಕಾಮಗಾರಿಯ ಅಂದಾಜು ಮೊತ್ತದ ವಿವರಗಳನ್ನು** ಸಿಮೆಂಟ್‌ನಿಂದ ಪ್ಲಾಸ್ಟರಿಂಗ್ ಮಾಡುವಾಗ ಎನ್‌ಗ್ರೇವ್ ಮಾಡುವುದು ಹಾಗೂ ಪೇಂಟಿಂಗ್‌ನಲ್ಲಿ ಬರೆಯುವುದು ಹಾಗೂ/ಅಥವಾ ಪ್ರತ್ಯೇಕವಾಗಿ ನಾಮಫಲಕವನ್ನು ಹಾಕುವುದು ಕಡ್ಡಾಯ. ಇದಕ್ಕಾಗಿ ತಗಲುವ ವೆಚ್ಚವನ್ನು ಅಂದಾಜು ಪತ್ರಿಕೆಯಲ್ಲಿ ನಿಗಧಿಪಡಿಸಬೇಕು.

18. ಜಲಾನಯನ ಕಾಮಗಾರಿ/ಚಟುವಟಿಕೆಗಳ ಅಂತಿಮ ಸಂದಾಯಕ್ಕೆ ಮುನ್ನ ನಾಮಫಲಕ ಅಳವಡಿಸುವ ಬಗ್ಗೆ, ಗುಣಮಟ್ಟ ಮತ್ತು ಪ್ರಮಾಣದ ಬಗ್ಗೆ ಖಾತ್ರಿಪಡಿಸಿಕೊಂಡು ಅಂತಿಮ ಸಂದಾಯಕ್ಕೆ ಅನುಮೋದನೆ ನೀಡುವುದು.

19. ಪ್ರತಿ ಕಾಮಗಾರಿಗಳನ್ನು ಅನುಷ್ಠಾನ ಮಾಡುವಾಗಲೇ ಒಂದು ಪ್ರತ್ಯೇಕ ಕಡತವನ್ನು ಇಟ್ಟು, ಈ ಕೆಳಕಂಡ ದಾಖಲಾತಿಗಳನ್ನು ಕಡ್ಡಾಯವಾಗಿ ನಿರ್ವಹಿಸಬೇಕು.

| ಕ್ರ.ಸಂ | **ನಿರ್ವಹಿಸ ಬೇಕಾಗಿರುವ ದಾಖಲಾತಿಗಳು** |
|---|---|
| 1 | ಕ್ಷೇತ್ರ/ಸ್ಥಳ ತಪಾಸಣಾ ವರದಿ |
| 2 | ಕಾಮಗಾರಿ/ಚಟುವಟಿಕೆ ಪೂರ್ವದ ಜಿಪಿಎಸ್‌ಯುಕ್ತ ಛಾಯಚಿತ್ರ |
| 3 | ತಾಂತ್ರಿಕ ಮಂಜೂರಾತಿ ಪಡೆದ ಆದೇಶದೊಂದಿಗೆ ಅಂದಾಜು ಪತ್ರಿಕೆ |
| 4 | ಜಿಲ್ಲಾ ಮಟ್ಟದ ಸಮಿತಿಯ ಅನುಮತಿ/ನಡವಳಿ/ಕಾರ್ಯಾದೇಶ |
| 5 | ಅಳತೆ ಪುಸ್ತಕದಲ್ಲಿ ದಾಖಲಿಸಿದ ಪ್ರತಿ |
| 6 | ಕಾಮಗಾರಿ/ಚಟುವಟಿಕೆಯ ಅನುಷ್ಠಾನ ಹಂತದ ಜಿಪಿಎಸ್‌ಯುಕ್ತ ಛಾಯಚಿತ್ರ |
| 7 | ಬಿಲ್ಸ್ ಮತ್ತು ವೋಚರ್‌ಗಳ ಪ್ರತಿ |
| 8 | ಕಾಮಗಾರಿ ಮುಕ್ತಾಯದ ವರದಿ/ಓಕೆ ಕಾರ್ಡ್ |
| 9 | ಕಾಮಗಾರಿ/ಚಟುವಟಿಕೆ ಮುಕ್ತಾಯಗೊಂಡ ನಂತರದ ಜಿಪಿಎಸ್‌ಯುಕ್ತ ಛಾಯ ಚಿತ್ರ |

19. ಜಿಲ್ಲೆಗಳಿಗೆ ಬಿಡುಗಡೆಯಾಗಿರುವ ಅನುದಾನವನ್ನು ಖಜಾನೆಯಿಂದ ಆಯಾ ವರ್ಷದ ಮಾರ್ಚ್ ಮಾಹೆಯೊಳಗೆ ಡ್ರಾ ಮಾಡಿ, ಸರಿಯಾಗಿ ಆಗಿರುವ ಜಲಾನಯನ ಚಟುವಟಿಕೆ/ಕಾಮಗಾರಿಗಳಿಗೆ ವೆಚ್ಚ ಭರಿಸುವುದು ಹಾಗೂ ಉಪಯೋಗಿತ ಪತ್ರವನ್ನು ಕೇಂದ್ರ ಕಚೇರಿಗೆ ಸಲ್ಲಿಸಲು ಸೂಚಿಸಿದೆ.

ಆಯುಕ್ತರು
ಜಲಾನಯನ ಅಭಿವೃದ್ಧಿ ಇಲಾಖೆ 1/2020
ಹಾಗು ಪದನಿಮಿತ್ತ ಸರ್ಕಾರದ ಕಾರ್ಯದರ್ಶಿಗಳು,
ಕೃಷಿ ಮತ್ತು ತೋಟಗಾರಿಕೆ ಇಲಾಖೆ

**ಇವರಿಗೆ,**

ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು, ಕೃಷಿ ಇಲಾಖೆ,